ಶ್ರೀ ಎಸ್. ಬಂಗಾರಪ್ಪ.—ಸಮಿತಿಯ ಸದಸ್ಯರಾಗಿರತಕ್ಕಂತಹವರು ಅದರ ಬಗ್ಗೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಅವರ ಅಭಿಪ್ರಾಯವನ್ನು ಹೇಳಲು ತಮ್ಮ ಅಪ್ಪಣೆಯನ್ನು ಪಡೆದಿದ್ದಾರೆ ತಾವು ಅಪ್ಪಣೆಯನ್ನು ಕೊಟ್ಟಿದ್ದೀರಿ. ಆ ಕೆಲಸವನ್ನು ಅವರು ಮಾಡುತ್ತಾರೆ.

ಅಧ್ಯಕ್ಷರು.—ಯಾವ ರೂಲ್ಸ್ ಪ್ರಕಾರ ? ಎಂದಾದರೂ ತಾವು ಹೇಳಬೇಕಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ತಮ್ಮ ಒಪ್ಪಿಗೆಯ ಮೇಲೆ.

ಅಧ್ಯಕ್ಷರು.—ಯಾವುದೇ ವಿಚಾರವಾಗಲಿ ನೋಟೀಸ್ ಕೊಡದೆ ಆ ರೀತಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಾನು ಅಪ್ಪಣೆ ಕೊಡುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ.—ಕೆಂದುರೆ ಮೋತಿ ಪ್ರಕರಣದ ಪರದಿಯನ್ನು ಏನು ಕೊಟ್ಟಿದ್ದಾರೆ, ಅದು ಪರದಿಯೇ ಆಗುವುದಿಲ್ಲ. ಏಕೆಂದರೆ ಯಾವುದೇ ಪರದಿಯನ್ನು ಮಂಡಿಸಬೇಕಾದರೆ. ಆ ಸಮಿತಿಯಲ್ಲಿ ದ್ದಂತಹ ಎಲ್ಲಾ ಸದಸ್ಯರ ಸಹಿಯನ್ನು ಹಾಕಿ ಆದರಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೋ ಅವರು ಪರದಿಯನ್ನು ಸಲ್ಲಿಸುತ್ತಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ ಆ ಸಮಿತಿಯಲ್ಲಿ ಯಾರು ಸದಸ್ಯರಾಗಿದ್ದಾರೊ ಅವರಿಗೇ ಇದು ಗೊತ್ತಿಲ್ಲ. ಅವರ ಪಕ್ಷದವರೇ ಸೇರಿಕೊಂಡು ಮಾಡಿಬಿಟ್ಟಿದ್ದಾರೆ. ಆದ್ದರಿಂದ ಇದು ಪರದಿಯಾಗುವುದಿಲ್ಲ. ಇದು ಪರದಿಯಾಗಿಲ್ಲದಿರುವಾಗ ಅದರ ಮೇಲೆ ಚರ್ಚೆ ಮಾಡುವಂತಹ ಪ್ರಶ್ನೆ ಎಲ್ಲಿದೆ ? ಸಮಿತಿಯ ಸಂಬಂಧಪಟ್ಟ ಸದಸ್ಯರಿಗೆ ಕರಡು ಪರದಿಯನ್ನು ಕಳುಹಿಸಿ ಅವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ನಂತರ ಸದನದಲ್ಲಿ ಅದನ್ನು ಮಂಡಿಸಿದ ಮೇಲೆ ನಂತರ ನಾವು ಯೋಚನೆ ಮಾಡಬೇಕಾಗುತ್ತದೆ. ಅದಕ್ಕಾಗಿ ತಮಗೆ ವಿಶೇಷ ಅಧಿಕಾರ ಇದೆ. ಅದನ್ನು ಉಪಯೋಗ ಮಾಡಿ, ಇದನ್ನು ಪುನಃ ಸಮಿತಿಯಲ್ಲಿ ಚರ್ಚೆ ಮಾಡಿ ಎಂಬುದಾಗಿ ಅವರಿಗೆ ಹೇಳಿ.

LEGISLATIVE BUSINESS

THE KARNATAKA PUPBLIC MONEYS(RECOVERY OF DUES) (AMENDMENT)BILL, 1985.

Motion to Consider

SRI A. LAKMISAGAR.—(MINISTER FOR LAW & PARLIMENTARY AFFIARS & URBAN DEVELOPMENT).—Sir, I beg to move.

> "That Amendment adopted by the Legislative Council to Clause 2 of the Karnataka Public Moneys (Recovery of Dues)(Amendment)Bill, 1985, as required under rule 110 of Rules of procedure and Conduct of Business in the Legislative Assembly be taken in to Consideration."

Question was Proposed

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಹಿಂದೆ ಈ ಸನ್ಮಾನ್ಯ ಸಭೆಯು ಇದ್ದರೆ ತನ್ನ ಒಪ್ಪಿಗೆಯನ್ನು ಕೊಟ್ಟಿತ್ತು. ಅದು ಮೇಲ್ಮನೆಯಲ್ಲಿ ಒಪ್ಪಿಗೆಯನ್ನು ಪಡೆಯುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರು ಮಾಡಿದಂತಹ ಒಂದು ಸಲಹೆ ಎಂದರೆ, ಈ ಮನೆಯಲ್ಲಿ ಪಾಸವಾದಂತಹ ತಿದ್ದುಪಡಿ ಮಸೂದೆಯಲ್ಲಿ " ಪ್ರಿಸ್ಕ್ರೈಬ್ಡ್ ರೇಟ್ " ಎಂದು ಇತ್ತು. ಅದು ಸರಿಯಲ್ಲವೆಂದು " ಅಗ್ರೀಡ್ ರೇಟ್ " ಎಂದು ಬದಲಾವಣೆ ಮಾಡಿದ್ದಾರೆ. ಅಷ್ಟೇ ಇದರಲ್ಲಿ ಬದಲಾವಣೆ ಯಾಗಿರುವಂತದ್ದು. ಮೇಲ್ಮನೆಯಲ್ಲಿ ಸದಸ್ಯರು ಏನು ಅಭಿಪ್ರಾಯ ಕೊಟ್ಟರು ಎಂದರೆ ಹಣವನ್ನು ಕೊಡತಕ್ಕಂತವರು ತುಂಬಾ ಪ್ರಭಾವ ಇರುವಂತಹವರು ಇದ್ದರೆ ಅದರ ಆಧಾರದ ಮೇಲೆ ಬಡ್ಡಿಯನ್ನು ಜಾಸ್ತಿಮಾಡತಕ್ಕ ಸನ್ನಿವೇಶ ಬರಬಹುದು ಎನ್ನತಕ್ಕಂತಹ ಸಂಶಯದ ಆಧಾರದ ಮೇಲೆ ಇದನ್ನು ಸ್ವಲ್ಪ ಬದಲಾಯಿಸಬೇಕು ಎನ್ನತಕ್ಕಂತ ಮಾತನ್ನು ಅವರು ಹೇಳಿದ್ದಾರೆ. ಈಗಾಗಲೇ ರಿಸರ್ವ್ ಬ್ಯಾಂಕಿನವರು ಇದರ ಬಗ್ಗೆ ತುಂಬಾ ಗೈಡ್‌ಲೈನ್ಸ್‌ಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಬಾಬುಗಳಿಗೆ ಸಂಬಂಧ

ಪಟ್ಟು ಹಾಗೆ ಸಾಲವನ್ನು ಕೊಟ್ಟಾಗ ಎಷ್ಟು ಬಡ್ಡಿ ಇರಬೇಕು ಎಂಬುದರ ಬಗ್ಗೆ ಆರ್.ಬಿ.ಐ. ನವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅದಕ್ಕಿಂತ ಜಾಸ್ತಿ ಇರಬಾರದು ಎನ್ನತಕ್ಕಂತಹ ಮಾತು ಬಂತು. ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಬದಲಾವಣೆಯಾಗಿರತಕ್ಕಂಥದ್ದು ಇಷ್ಟೆ. ಅದನ್ನು ಓದಿಬಿಡುತ್ತೇನೆ ' for the words, " prescribed rate, in the two place where it occurs, the words " agreed rate within the limits prescribed by the Reserve Bank of Inia and other Government Financing or Refinancing institutions from time to time " shall be substituted " ಇದು ಮೊದಲೇ ಸೇರಿಕೊಂಡಿತ್ತು. ಅಂತರಗತವಾಗಿತ್ತು. ಸಾಲವನ್ನು ಕೊಡತಕ್ಕಂತಹ ಸಂಸ್ಥೆಗಳು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿರತಕ್ಕ ಬಡ್ಡಿ ರೇಟಿಗಿಂತ ಜಾಸ್ತಿ ಮಾಡುವ ಹಾಗೆ ಇಲ್ಲ, ಜಾಸ್ತಿ ತೆಗೆದುಕೊಳ್ಳುವ ಹಾಗೂ ಇಲ್ಲ. ಇದನ್ನು ಎಕ್ಸ್‌ಪ್ಲೇನ್ ಮಾಡಿದ್ದೇನೆ. ಇದರಲ್ಲಿ ಹೊಸ ವಿಚಾರ ಯಾವುದೂ ಇಲ್ಲ. ಆದರಿಂದ ಇದಕ್ಕೆ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEKER.—I will now put the consideration motion to the vote of the House the question is a that Amendment adopted to clause 2 of Karnataka public Moneys(Recovery of dues)(Amendment Bill 1985 as required under rule 110 of rules of procedure and conduct of business in the legislative Assembly be taken in to consideration.

Motion was adopted and the Amendment was agreed to

THE KARNATAKA LEGISLATURE SALARIES, PENSIONS AND ALLOWANCES(THIRD AMENDMENT)BILL, 1985.

MOTION TO CONSIDER

SRI A. LASHMI SAGAR.(MINISTER FOR LAW, PARLIMENTARY AFFAIRS AND URBAN DEVELOMENT).—Sir, I beg to move:

> " That the Karnataka Legislature Salaries, pensions and Allowances(Third Amendment)Bill, 1985 be taken into consideration. "

The Question was proposed.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ೨-೩ ಅಂಶಗಳು ಇವೆ. ಮೊದಲನೆಯದು ಸನ್ಮಾನ್ಯ ಸದಸ್ಯರಿಗೆ ಈ ಸಂಬಳದ ಮುಖಾಂತರ ೭೦೦-೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತೆ ಅಲೋಯನ್ಸ್ ಎಲ್ಲಾ ಸೇರಿ ೫೫೦-೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದು ಮೊದಲು ಜಾರಿಗೆ ಬಂದದ್ದು ೧-೪-೧೯೮೧ ಇದು ಆಗಿ ೪ ವರ್ಷಗಳು ಮುಗಿದಿದೆ. ಇದು ಆದ ನಂತರ ಸನ್ಮಾನ್ಯ ಸದಸ್ಯರು ಫೋಸ್ಟಲ್ ಖರ್ಚಿಗೆ ಜಾಸ್ತಿ ಹಣವನ್ನು ಖರ್ಚು ಮಾಡಬೇಕಾಗಿದೆ. ಅದೇ ರೀತಿ ಟೆಲಿಫೋನ್ ಬಿಲ್ಲಿನ ಹಣ ಕೂಡ ಜಾಸ್ತಿಯಾಗಿದೆ. ಮತ್ತೆ ಸನ್ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡುವುದಕ್ಕೋಸ್ಕರ ಅನೇಕ ಸಲ ತಿರುಗಾಡಬೇಕಾಗುತ್ತದೆ. ಪೆಟ್ರೋಲ್‌ದರ ಕೂಡ ಜಾಸ್ತಿಯಾಗಿದೆ. ಮಾನ್ಯ ಮಂಟೂರ್‌ರವರು ೪ ಸಾವಿರ ರೂಪಾಯಿಗಳ ಟೆಲಿಫೋನ್ ಬಿಲ್ ಬಂತು ಎಂದು ಹೇಳಿದರು. ಅದು ವಿಶೇಷ ಸಂದರ್ಭದಲ್ಲಿ ಆಗಿರಬಹುದು. ಟೆಲಿಫೋನ್ ಬಿಲ್‌ಗಳ ಮೊತ್ತ ಜಾಸ್ತಿಯಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ ಆದ್ದರಿಂದ ೫೫೦ ರೂಪಾಯಿಗಳನ್ನು ಸೇರಿಸಿ ೧೩೦೦ ರೂಪಾಯಿಗಳನ್ನು ಮಾಡತಕ್ಕ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರ ಜೊತೆಗೆ ಈ ತಿದ್ದುಪಡಿ ಏಪ್ರಿಲ್ ಒಂದರಿಂದ ಜಾರಿಗೆ ಬರತಕ್ಕ ವಿಚಾರ ಇದರಲ್ಲಿ ಅಡಕವಾಗಿದೆ. ತಿದ್ದು